**ಸಾಕ್ಷಿಯನ್ನು ದಿನಾಂಕ 13-07-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎನ್.ಡಿ ವಕೀಲರಿಂದಃ**

1. ದಾವಾ ಸ್ವತ್ತು ಸರ್ವೆ ನಂಬರ್ 15 ರಲ್ಲಿ 1 ಎಕರೆ 9 ಗುಂಟೆ ವಿಸ್ತೀರ್ಣ ಇದೆ. ಸರ್ವೆ ನಂಬರ್ 15 ರಲ್ಲಿ ಒಟ್ಟಾರೆ ಸುಮಾರು 500 ಚಿಲ್ಲರೆ ಎಕರೆ ಜಮೀನು ಇರಬಹುದು. ಸಾಕ್ಷಿ ಪುನಃ ಸದರಿ ಸರ್ವೆ ನಂಬರ್ ನಲ್ಲಿ ಪೋಡಿಯಾಗಿಲ್ಲ ಎನ್ನುತ್ತಾರೆ. ದಾವಾ ಸ್ವತ್ತನ್ನು ನನ್ನ ಗಂಡನಿಗೆ 1977 ರಲ್ಲಿ ಮಂಜೂರು ಮಾಡಲಾಗಿತ್ತು. ಮಂಜೂರಾತಿಗೂ ಮೊದಲೇ ನನ್ನ ಗಂಡ ಸದರಿ ಜಮೀನನ್ನು ಸಾಗುವಳಿ ಮಾಡುತ್ತಿದ್ದರು. ನನ್ನ ಮದುವೆ 1974 ರಲ್ಲಿ ಆಗಿತ್ತು. ಮಂಜೂರಾತಿಗೂ ಮೊದಲು ತಹಶೀಲ್ದಾರ್ ರವರು ದಾವಾ ಸ್ವತ್ತಿಗೆ ಭೇಟಿ ಕೊಟ್ಟು ಸ್ಥಳ ಪರಿವೀಕ್ಷಣೆ ಮಾಡಿದ ಬಗ್ಗೆ ಅಥವಾ ನಕಾಶೆ ತಯಾರಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಪುನಃ ನಕಾಶೆ ಇದೆ ಎನ್ನುತ್ತಾರೆ. ಆ ರೀತಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಿ.ಪಿ.–5 ರಂತೆ ನಾನು ಹಾಜರುಪಡಿಸಿರುವ ನಕಾಶೆ ದಾವಾ ಸರ್ವೆ ನಂಬರ್ 15 ಕ್ಕೆ ಸಂಬಂಧಿಸಿದೆ. ಸದರಿ ನಕಾಶೆಯಲ್ಲಿ ದಾವಾ ಸ್ವತ್ತು ಎಲ್ಲಿದೆ ಎಂದು ಕಾಣುವುದಿಲ್ಲ.

2. ದಾವಾ ಸ್ವತ್ತಿನ ಪೂರ್ವ ದಿಕ್ಕಿಗೆ ಜಮೀನು ಹೊಂದಿದ್ದಾರೆ ಎನ್ನಲಾದ ರೇವಣ್ಣ ಎನ್ನುವವರು ಈಗ ಬದುಕಿಲ್ಲ. ಅವರ ಅಂತರಗಂಗೆ ಗ್ರಾಮದವರು. ಅವರಿಗೆ ಜಮೀನು ಹೇಗೆ ಬಂದಿತ್ತು

ಎನ್ನುವುದು ನನಗೆ ಗೊತ್ತಿಲ್ಲ. ಅವರ ಜಮೀನಿಗೆ ಸಂಬಂಧಪಟ್ಟ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. ರೇವಣ್ಣನಿಗೆ ಎಷ್ಟು ಜಮೀನು ಮಂಜೂರಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಅವರ ಜಮೀನಿನ ವಿಸ್ತೀರ್ಣ ಮತ್ತು ಚಕ್ಕುಬಂಧಿ ನನಗೆ ಗೊತ್ತಿಲ್ಲ. ರಾಮಸ್ವಾಮಿ ಎಂಬುವವರ ಜಮೀನು ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ಇದೆ. ಅವರ ಜಮೀನಿನ ವಿಸ್ತೀರ್ಣ ನನಗೆ ಗೊತ್ತಿಲ್ಲ ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ನಾನು ಕೊಟ್ಟಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ಜಮೀನು ಹೊಂದಿರುವ ನಾಗರಾಜ್ ಈ ದಾವೆಯ ಪ್ರತಿವಾದಿಯ ಸಹೋದರ ಎಂದರೆ ಸರಿ. ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ಜಮೀನು ಹೊಂದಿರುವ ಅರ್ಜುನ್ ರಾವ್ ರವರು ಅಂತರಗಂಗೆ ಗ್ರಾಮದವರು. ಅವರ ಜಮೀನಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ಅವರ ಜಮೀನಿಗೆ ಸಂಬಂಧಪಟ್ಟ ದಾಖಲೆ ಏನಿದೆ ಎನ್ನುವುದು ನನಗೆ ಗೊತ್ತಿಲ್ಲ.

3. ಪ್ರತಿವಾದಿಯ ಸಹೋದರ ಮತ್ತು ಅವರ ಸಂಬಂಧಿಗಳು ಸರ್ವೆ ನಂಬರ್ 15 ರಲ್ಲಿ ಸುತ್ತ–ಮುತ್ತಲು 5 ಕಡೆ ಜಮೀನು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ಸಾಕ್ಷಿ ಪುನಃ ಅವರ ಜಮೀನು ನಮ್ಮ ಜಮೀನಿನ ನಂತರ ಇದೆ ಎನ್ನುತ್ತಾರೆ. ಪ್ರತಿವಾದಿಯ ಗಂಡ ಕೃಷ್ಣೋಜಿ ರಾವ್ ರವರಿಗೆ ಎಷ್ಟು ಜಮೀನು ಇದೆ ಎನ್ನುವುದು ನನಗೆ ಗೊತ್ತಿಲ್ಲ. ಅವರ ಜಮೀನಿಗೆ ಸಂಬಂಧಪಟ್ಟ ದಾಖಲೆಗಳನ್ನು ನಾನು ನೋಡಿಲ್ಲ ಎಂದರೆ ಸರಿ.

4. ನನ್ನ ಗಂಡ 2007 ರಲ್ಲಿ ತೀರಿಕೊಂಡರು. ದಾವಾ ಸ್ವತ್ತನ್ನು ಹೊರತುಪಡಿಸಿ ಸರ್ವೆ ನಂಬರ್ 15 ರಲ್ಲಿ ಇನ್ನೊಂದು ಕಡೆ ನನಗೆ ಜಮೀನು ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು

ನಿಖರವಾಗಿ ಎಲ್ಲಿದೆ ಎಂದು ತಿಳಿದುಕೊಳ್ಳಲು ನನ್ನ ಗಂಡ ತೀರಿಕೊಂಡ ನಂತರ ನಾನು ಅಳತೆಗೆ ಅರ್ಜಿ ಹಾಕಿಲ್ಲ ಎಂದರೆ ಸಾಕ್ಷಿ ಹಾಕಿದ್ದೇನೆ ಆದರೆ ಅಳತೆಗೆ ಯಾರು ಬಂದಿಲ್ಲ ಎನ್ನುತ್ತಾರೆ. ಪ್ರತಿವಾದಿಯರು ಕಳೆದ 5-6 ವರ್ಷಗಳಿಂದ ನನ್ನ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದಾರೆ. ಯಾವ ರೀತಿ ತೊಂದರೆ ಕೊಡುತ್ತಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ದಾವಾ ಸ್ವತ್ತಿನ ಬಳಿ ಬಂದು ಇದು ನಿಮ್ಮ ಜಮೀನು ಅಲ್ಲ, ನಮ್ಮದು, ನಿಮ್ಮ ಜಮೀನು ಎಲ್ಲಿದೆ ಎಂದು ಹುಡುಕಿಕೊಳ್ಳಿ ಎಂದರು ಎನ್ನುತ್ತಾರೆ. ಆ ರೀತಿ ಯಾರು ಹೇಳಿದರು ಎಂಬ ಪ್ರಶ್ನೆಗೆ ಸಾಕ್ಷಿ ಪ್ರತಿವಾದಿಯ ಅಣ್ಣ ಶ್ರೀನಿವಾಸ್ ರಾವ್ ಹೇಳಿದರು ಎನ್ನುತ್ತಾರೆ. ಸದರಿ ಶ್ರೀನಿವಾಸ್ ರಾವ್ ರವರ ವಿರುದ್ಧ ನಾನು ಪೊಲೀಸರಿಗೆ ದೂರು ಕೊಟ್ಟಿಲ್ಲ. ಸಾಕ್ಷಿ ಪುನಃ ದಾವಾ ಸ್ವತ್ತನ್ನು ಪ್ರತಿವಾದಿ ಉಳುಮೆ ಮಡುತ್ತಿದ್ದರಿಂದ ಅವರ ವಿರುದ್ಧ ಪೊಲೀಸರಿಗೆ ದೂರು ಕೊಟ್ಟಿದ್ದೇನೆ ಎನ್ನುತ್ತಾರೆ. ದೂರು ಕೊಟ್ಟ ಬಗ್ಗೆ ದಾಖಲೆ ಇದೆ. ದೂರನ್ನು 7–8 ವರ್ಷಗಳ ಹಿಂದೆ ಕೊಟ್ಟಿದ್ದೆ.

5. ದಾವಾ ಸ್ವತ್ತು ಸೇರಿದಂತೆ ಪ್ರತಿವಾದಿ ಮತ್ತು ಆಕೆಯ ಅಣ್ಣಂದಿರು ಹಲವಾರು ವರ್ಷಗಳಿಂದ ಅಡಿಕೆ ತೋಟ ಮಾಡಿಕೊಂಡು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನನ್ನ ಜಮೀನಿನಲ್ಲಿ ನಾನೇ ಅಡಿಕೆ ತೋಟ ಮಾಡಿದ್ದೇನೆ ಎನ್ನುತ್ತಾರೆ. ನಾನು ಅಡಿಕೆ ತೋಟ ಮಾಡಿದ್ದೇನೆ ಎಂದು ತೋರಿಸುವ ದಾಖಲೆ ಇದೆ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಅಡಿಕೆ ತೋಟ ಇರುವ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸಾಕ್ಷಿ ಪಹಣಿಯಲ್ಲಿದೆ ಎನ್ನುತ್ತಾರೆ. ವಾದ ಪತ್ರದಲ್ಲಿ ದಾವಾ ಸ್ವತ್ತಿನಲ್ಲಿ ಅಡಿಕೆ ತೋಟ ಇರುವ ಬಗ್ಗೆ ಬರೆಸಿಲ್ಲ ಎಂದರೆ ಸರಿಯಲ್ಲ. ವಾದ ಪತ್ರವನ್ನು

ನಾನು ಬರೆಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿದ್ದನ್ನು ವಕೀಲರಿಗೆ ಹೇಳಿದ್ದೇನೆ ಮತ್ತು ವಾದ ಪತ್ರವನ್ನು ಅವರೇ ತಯಾರಿಸಿದ್ದಾರೆ ಎನ್ನುತ್ತಾರೆ.

6. ಪ್ರತಿವಾದಿಯರಿಂದ 25–30 ವರ್ಷಗಳ ಹಿಂದಿನಿಂದಲೂ ಸರ್ವೆ ನಂಬರ್ 15 ರಲ್ಲಿ 2 ಎಕರೆ ಜಮೀನನ್ನು ಬಗರ್ ಹುಕ್ಕುಂ ಉಳುಮೆ ಮಾಡುತ್ತಿದ್ದರು ಎಂದರೆ ಸಾಕ್ಷಿ ನಾನು ನನ್ನ ಜಮೀನನ್ನು  ಸಾಗುವಳಿ ಮಾಡುತ್ತಿದ್ದೇನೆ ಎನ್ನುತ್ತಾರೆ. ಪ್ರತಿವಾದಿಯ ಸದರಿ ಜಮೀನಿನ ಪೂರ್ವಕ್ಕೆ ಮಂಜುನಾಥ ರವರ ಜಮೀನು ಹಾಗೂ ರೇವಣ್ಣ ರವರ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಪಶ್ಚಿಮಕ್ಕೆ ನಾಗರಾಜ್ ರಾವ್ ಬರ್ಗೆ ರವರ ಜಮೀನು ಇದೆ ಎನ್ನುವುದು ನನಗೆ ಗೊತ್ತಿಲ್ಲ. ದಕ್ಷಿಣಕ್ಕೆ ಅರ್ಜುನ್ ರಾವ್ ರವರ ಜಮೀನು ಮತ್ತು ಉತ್ತರಕ್ಕೆ ನಾಗರಾಜ್ ರವರ ಜಮೀನು ಇದೆ ಎನ್ನುವುದು ನನಗೆ ಗೊತ್ತಿಲ್ಲ.

7. ದಾವಾ ಸ್ವತ್ತಿನಲ್ಲಿ ನನ್ನ ಸ್ವಾಧೀನಕ್ಕೆ ಪ್ರತಿವಾದಿ ತೊಂದರೆ ಕೊಟ್ಟರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲೂ ಇಲ್ಲ ಮತ್ತು ಸದರಿ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು–ಅಧಿಕಾರ ಅಥವಾ ಮಾಲಿಕತ್ವ ಇಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡ ನಂತರ ನಮಗೆ ಸೇರಿದ ಜಮೀನಿನ ದಾಖಲೆಗಳು ಬದಲಾವಣೆಯಾಗಿಲ್ಲ ಎಂದರೆ ಸರಿ. ದಾವಾ ಸ್ವತ್ತು ಮಂಜೂರಾಯಿತ್ತು ಎನ್ನಲಾದ ದಿನದಿಂದ ಇಲ್ಲಿಯವರೆಗೆ ನನಾಗಲಿ ಅಥವಾ ನನ್ನ ಗಂಡನಾಗಲಿ ದಾವಾ ಸ್ವತ್ತಿನ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ನಾನು ಅಂತರಗಂಗೆ ಗ್ರಾಮದಲ್ಲಿ ಚಹಾ ಅಂಗಡಿ ಇಟ್ಟುಕೊಂಡು ಅಲ್ಲೇ

ವಾಸವಿದ್ದೇನೆ ಎಂದರೆ ಸರಿಯಲ್ಲ.

8. ದಾವಾ ಸ್ವತ್ತಿಗೆ ಸಂಬಂಧಪಟ್ಟ ಕಂದಾಯ ದಾಖಲೆಗಳನ್ನು ಮೋಸದಿಂದ ನನ್ನ ಹೆಸರಿಗೆ ಮಾಡಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ಸುಳ್ಳು ಸಂಗತಿಗಳನ್ನು ಹೇಳಿ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**